# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ :- | 750 |
| ಮಾನ್ಯ ಸದಸ್ಯರ ಹೆಸರು :- | ಶ್ರೀ ಅ. ದೇವೇಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ:- | **26-12-2022** |
| ಉತ್ತರಿಸಬೇಕಾದ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು |

| ಕ್ರ.ಸಂ | ಪ್ರಶ್ನೆ | |
|---|---|---|
| (ಅ) | ಸರ್ಕಾರವು ದಿನಾಂಕ: 20.07.2022ರಂದು NHM/RBSK ರಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸ ನಿರ್ವಹಿಸುತ್ತಿರುವ ಆಯುಷ್ ವೈದ್ಯರ ವೇತನವನ್ನು ರೂ. 48,000/- ಗಳಿಗೆ ತಕ್ಷಣ ಹೆಚ್ಚಿಸುವುದಾಗಿ ಪತ್ರಿಕಾ ಹೇಳಿಕೆ ನೀಡಿರುವುದು ನಿಜವೇ, ಇದು ಕಾರ್ಯಗತವಾಗಿದೆಯೇ; ಆಗದಿದ್ದಲ್ಲಿ, ಇದಕ್ಕೆ ಕಾರಣವೇನು; (ಮಾಹಿತಿ ಒದಗಿಸುವುದು) | ರಾಷ್ಟ್ರೀಯ ಆರೋಗ್ಯ ಅಭಿಯಾನದ ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮ (RBSK) ಅಡಿಯಲ್ಲಿನ ಆಯುಷ್ ವೈದ್ಯರಿಗೆ ರೂ. 48000/- ವೇತನ ಹೆಚ್ಚಳ ಕುರಿತು ಯಾವುದೇ ಪತ್ರಿಕಾ ಪ್ರಕಟಣೆ ನೀಡಿರುವುದಿಲ್ಲ. |
| (ಆ) | NHK/RBSK ಅಡಿಯಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸನಿರ್ವಹಿಸುತ್ತಿರುವ ಆಯುಷ್ ವೈದ್ಯರಿಗೂ, ಅಲೋಪತಿ ವೈದ್ಯರಿಗೂ ಒಂದೇ ಕೆಲಸ ಆದರೂ ವೇತನದಲ್ಲಿ ತಾರತಮ್ಯವಿದೆಯೇ; ಹಾಗಿದ್ದಲ್ಲಿ, ಕಾರ್ಮಿಕ ನ್ಯಾಯಾಲಯದ ಆದೇಶಾನುಸಾರ ಸಮಾನ ಕೆಲಸಕ್ಕೆ ಸಮಾನ ವೇತನ ಅನ್ವಯವಾಗುವುದಿಲ್ಲವೇ; ಸಮಾನ ವೇತನ ಪಡೆಯಲು ಆಯುಷ್ ವೈದ್ಯರು ಅರ್ಹರಿಲ್ಲವೇ; (ಮಾಹಿತಿ ಒದಗಿಸುವುದು) | • NHM/RBSK ಕಾರ್ಯಕ್ರಮದಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ BAMS ವೈದ್ಯರ ವೇತನಕ್ಕೂ, MBBS ವೈದ್ಯರ ವೇತನಕ್ಕೂ ವ್ಯತ್ಯಾಸವಿರುತ್ತದೆ.<br>• ಕೇಂದ್ರ ಸರ್ಕಾರ - ರಾಷ್ಟ್ರೀಯ ಆರೋಗ್ಯ ಅಭಿಯಾನದ (NHM) ಆರ್. ಬಿ. ಎಸ್. ಕೆ. ಕಾರ್ಯಕ್ರಮದ ಅಡಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವೈದ್ಯರಿಗೆ (BAMS & MBBS) ಪ್ರತೀ ವರ್ಷದ ಆರ್. ಓ. ಪಿ. ಯಲ್ಲಿ ಅನುಮೋದಿತವಾದ ವೇತನವನ್ನು ನೀಡಲಾಗುತ್ತಿದೆ. |
| (ಇ) | ಖಾಸಗಿ ವಲಯದಲ್ಲಿ ಕೆಲಸ ಮಾಡುವ ಆಯುಷ್ ವೈದ್ಯರಿಗೆ ಸರ್ಕಾರ ಕನಿಷ್ಠ ವೇತನ ನಿಗದಿಪಡಿಸಿದೆಯೇ; ನಿಗದಿಪಡಿಸಿದ್ದಲ್ಲಿ, ನಿಗದಿಪಡಿಸಿರುವ ವೇತನವೆಷ್ಟು; ಸರ್ಕಾರದಲ್ಲಿ ಕೆಲಸ ನಿರ್ವಹಿಸುತ್ತಿರುವ ಆಯುಷ್ ವೈದ್ಯರಿಗೆ ಈ ಕನಿಷ್ಠ ವೇತನ ಅನ್ವಯವಾಗುವುದಿಲ್ಲವೇ? (ಮಾಹಿತಿ ಒದಗಿಸುವುದು) | ಖಾಸಗಿ ವಲಯದಲ್ಲಿ ಕೆಲಸ ಮಾಡುತ್ತಿರುವ ಆಯುಷ್ ವೈದ್ಯರಿಗೆ ಆಯುಷ್ ಇಲಾಖೆಯಿಂದ ಕನಿಷ್ಠ ವೇತನ ನಿಗದಿಪಡಿಸಿರುವುದಿಲ್ಲ. ಮುಂದುವರೆದು ಕಾರ್ಮಿಕ ಇಲಾಖೆಯ ಅಧಿಸೂಚನೆ ಸಂಖ್ಯೆ: KEA 125 LWA 2015, ದಿನಾಂಕ: 06.01.2017 (Minimum wages & VDA from 01-04-2022 to 31-03.2023) ರಲ್ಲಿ ಸೂಚಿಸಿರುವಂತೆ Employment in Hospital Maternity homes, Nursing homes, Clinics & de addiction centers ಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಖಾಸಗಿ ಆಯುಷ್ ವೈದ್ಯರಿಗೆ (Junior doctors (degree), Ayurvedic doctors (degree) ರೂ.43,141.60/- ನಿಗದಿಯಾಗಿರುತ್ತದೆ. |

--2

| | | |
|---|---|---|
| | | • ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಆಯುಷ್ ವೈದ್ಯರಿಗೆ ರೂ. 40,000/- ರಂತೆ ಕನಿಷ್ಠ ವೇತನವು ಅನ್ವಯವಾಗುತ್ತದೆ.<br>• ರಾಷ್ಟ್ರೀಯ ಆರೋಗ್ಯ ಅಭಿಯಾನ (NHM) ದ ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮದಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಆಯುಷ್ ವೈದ್ಯರಿಗೆ NHM-RoP ಅನುಮೋದನೆಯಂತೆ ರೂ. 25,000/- ಮೂಲ ಮಾಸಿಕ ವೇತನವನ್ನು ನೀಡಲಾಗುತ್ತಿದೆ.<br><br>ಕನಿಷ್ಠ ವೇತನದ ಪೂರೈಕೆಯ ವ್ಯತ್ಯಾಸದ ಅನುದಾನ ಅನುಮೋದನೆಗಾಗಿ ಮುಂಬರುವ NHM - Supplementary PIPರಲ್ಲಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು. |

ಸಂಖ್ಯೆ; ಆಕುಕ 750 ಚುರಪ್ರ 2022
[HFW 109 STQ 2022]

(ಡಾ॥ ಕೆ.ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು